ಶ್ರೀಕೃಷ್ಣ ಸ್ಮರಣೆ

# ಕುಮಾರವ್ಯಾಸ ವರ್ಣಿಸಿದ ಜರಾಸಂಧ ವಧೆ

ಡಾ. ಕೆ. ಅನಂತರಾಮು

**ಮ**ಹಾಭಾರತಕ್ಕೆ ಶ್ರೀಕೃಷ್ಣನೇ ಸೂತ್ರಧಾರಿ, ಅವನೇ ನಾಯಕಮಣಿ. ನಡುಗನ್ನಡ ಭಾಷೆಯಲ್ಲಿ 'ಕರ್ನಾಟ ಭಾರತ ಕಥಾಮಂಜರಿ'ಯೆಂಬ ಹೆಸರಿನಲ್ಲಿ ಮಹಾಭಾರತವನ್ನು ಭಾಮಿನೀಷಟ್ಪದಿಯಲ್ಲಿ ರಚಿಸಿರುವ ಕುಮಾರವ್ಯಾಸನಿಗಾದರೋ ಅದು 'ಕೃಷ್ಣಕಥೆ'ಯಲ್ಲದೆ ಬೇರೆಯಲ್ಲ. **'ತಿಳಿಯಹೇಳುವೆ ಕೃಷ್ಣ ಕಥೆಯನು ಇಳೆಯ ಜಾಣರು ಮೆಚ್ಚುವಂತಿರೆ'** ಎಂದೇ ಅವನು ಘೋಷಿಸಿದ್ದಾನೆ. ಅವನು ಶ್ರೀಕೃಷ್ಣನನ್ನು ಕಂಡ ಪರಿಯನ್ನು ಜರಾಸಂಧನ ಪ್ರಸಂಗದ ಮೂಲಕ ಚಿಂತನ ಮಾಡುವುದು ಈ ಲೇಖನದ ಉದ್ದೇಶವಾಗಿದೆ.

## ಜರಾಸಂಧನ ಸಂಹಾರ

**ಮಗಧಮಂಡಲಕ್ಕೆ ಜರಾಸಂಧ ಮಹಾರಾಜ:** ಮಗಧ ರಾಜ್ಯಕ್ಕೆ ದೊರೆಯಾಗಿದ್ದರಿಂದ ಅವನು ಮಾಗಧನೆಂಬ ಹೆಸರಿನಿಂದಲೂ ಕರೆಸಿಕೊಳ್ಳುತ್ತಿದ್ದನು. ಅವನು ದುಷ್ಟನೂ ದುರಹಂಕಾರಿಯೂ ಲೋಕಕಂಟಕನೂ ಆಗಿದ್ದನು. ತಾನು ಕೈಗೊಂಡಿರುವ ರಾಜಸೂಯಯಾಗವನ್ನು ನಿರ್ವಿಘ್ನವಾಗಿ ನಡೆಸಿಕೊಡಬೇಕೆಂದು ಧರ್ಮರಾಯನು ಶ್ರೀಕೃಷ್ಣನನ್ನು ಬೇಡಿಕೊಂಡನು. ಆಗ ಕೃಷ್ಣನು ಆ ಯಾಗಕ್ಕೆ ಕಂಟಕನಾದ ಜರಾಸಂಧನನ್ನು ಮೊದಲು ತೊಡೆದುಹಾಕಬೇಕೆಂದು ಸೂಚಿಸಿದನು. ಆ ಸಂಹಾರ ಕಾರ್ಯವೂ ಅವನ ಮಾರ್ಗದರ್ಶನದಲ್ಲಿಯೇ ನಡೆಯುವಂತಾಯಿತು. ಒಂದು ಸೈನ್ಯವನ್ನು ಜೊತೆಮಾಡಿಕೊಂಡು ಶ್ರೀಕೃಷ್ಣನು ಭೀಮಾರ್ಜುನರೊಡಗೂಡಿ, ಮಗಧರಾಜ್ಯದ ರಾಜಧಾನಿಯಾದ ಗಿರಿವ್ರಜವೆಂಬ ಪಟ್ಟಣವನ್ನು ಹೊಕ್ಕನು. ಆಗ ಮಧ್ಯರಾತ್ರಿಯಾಗಿತ್ತು. ಆ ಪಟ್ಟಣದಲ್ಲೊಂದು ಪರ್ವತವೂ ಇತ್ತು. ಅದರ ಶಿಖರದಲ್ಲಿ ಜರಾಸಂಧನು ಭಾರಿ ಮೂರು ನಗಾರಿಗಳನ್ನು ಸ್ಥಾಪಿಸಿದ್ದನು. ಅವನ ಪಾಲಿಗೆ ಅವು ಪೂಜ್ಯ ವಸ್ತುಗಳು.

**ಜರಾಸಂಧನು ನಡುಗಿಹೋದನು:** ಬೆಟ್ಟದ ತಪ್ಪಲಲ್ಲಿ ಸೇನೆಯನ್ನು ಬೀಡುಬಿಡಿಸಿ, ಕೃಷ್ಣಭೀಮಾರ್ಜುನರು ನಡುರಾತ್ರಿಯಲ್ಲಿಯೇ ಪರ್ವತವನ್ನೇರಿ ಏಕಕಾಲದಲ್ಲಿ ಆ ಮೂರೂ ನಗಾರಿಗಳನ್ನು ಅವು ಒಡೆದುಹೋಗುವಂತೆ ಬಡಿದು, ಜರಾಸಂಧನು ಎಚ್ಚರಗೊಳ್ಳುವಂತೆ ಮಾಡಿದರು. ಅಷ್ಟು ಮಾತ್ರವಲ್ಲದೆ ಅವನು ಭಯದಿಂದ ತಲ್ಲಣಿಸಿದನು. ಬೆಟ್ಟದಿಂದಿಳಿದ ಕೃಷ್ಣಭೀಮಾರ್ಜುನರು, ರಾಜಬೀದಿಯಲ್ಲಿ ನಡೆದುಬರುತ್ತ ವಿವಿಧ ವಸ್ತುಗಳನ್ನು ಸೂರೆ ಮಾಡಿದರು. ಅವರು ಬ್ರಾಹ್ಮಣ ವೇಷವನ್ನು ಧರಿಸಿಕೊಂಡಿದ್ದರು. ಅರಮನೆಯನ್ನು ಹೊಕ್ಕಾಗ ಜರಾಸಂಧನು ಕ್ರೋಧದಿಂದ ಇದಿರಾದನು. "ನೀನು ರಾಜ್ಯಮದದಲ್ಲಿ ಮುಳುಗಿ, ಮಾನ್ಯರನ್ನು ಇರಿದು, ನಿನ್ನ ಭುಜಬಲವನ್ನು ಹೆಚ್ಚಿಸಿಕೊಂಡಿದ್ದೀಯೆ! ಅನೇಕ ದೊರೆಗಳನ್ನು ಹಿಂಸಿಸಿ, ಅವರನ್ನು ನಿನ್ನ ಸೆರೆಮನೆಗೆ ತಳ್ಳಿದ್ದೀಯೆ. ನಿನ್ನ ಪಾಪದ ಕೊಡ ಈಗ ತುಂಬಿದೆ. ಬಂಧನದಲ್ಲಿರುವ ದೊರೆಗಳನ್ನು ಬಿಡುಗಡೆಗೊಳಿಸು. ಅದೇ ನೀನು ಮಾಡಿಕೊಳ್ಳಬೇಕಾದ ಪ್ರಾಯಶ್ಚಿತ್ತ" ಎಂದು ಶ್ರೀಕೃಷ್ಣನು ಮಾಗಧನನ್ನು ಎಚ್ಚರಿಸಿದನು.

ಲೇಖಕರು ನಿವೃತ್ತ ಕಾಲೇಜು ಪ್ರಾಧ್ಯಾಪಕರು, ಚಿಂತಕರು, ಪ್ರವಚನಪಟುಗಳು ಮತ್ತು ಉತ್ತಮ ಬರಹಗಾರರು.

**ನೀನೇನು ಆ ದೊರೆಗಳ ಮಗನೋ ಮೊಮ್ಮಗನೋ:** ಶ್ರೀಕೃಷ್ಣನ ಮಾತುಗಳಿಂದ ಜರಾಸಂಧನು ಕೆರಳಿ ಕೆಂಡವಾದನು. "ನೀನೇನು ಆ ದೊರೆಗಳ ಮಗನೋ ಮೊಮ್ಮಗನೋ; ನೆಂಟನೋ, ಜೀತಗಾರನೋ; ಅವರನ್ನು ಸೆರೆಯಿಂದ ಬಿಡಿಸಲು ನೀನಾರು?" ಎಂದು ಕ್ರೋಧದಿಂದ ಗುಡುಗಿದನು. ಆಗ ಶ್ರೀಕೃಷ್ಣನು "ಅಧರ್ಮದಲ್ಲಿ ಮುಳುಗಿರುವವರ ತಲೆಗಳನ್ನು ಚೆಂಡಾಡುತ್ತೇನೆ. ಧರ್ಮವನ್ನು ಪ್ರೀತಿಸಿ ಪಾಲಿಸುವವರನ್ನು ಕೊಂಡಾಡುತ್ತೇನೆ. ಹೀಗೆ ಶಿಕ್ಷಿಸುವುದೇ, ರಕ್ಷಿಸುವುದೇ ನನ್ನ ಕಾರ್ಯ" ಎಂದು ಹೇಳುತ್ತ, ಗುರುತು ನೀಡುತ್ತ, "ನಮ್ಮಲ್ಲಿ ಯಾರೊಡನೆಯಾದರೂ ಸರಿ, ಯುದ್ಧಕ್ಕೆ ಸಿದ್ಧನಾಗು" ಎಂದು ಮೂದಲಿಸಿದನು. ಆಗಂತೂ ಜರಾಸಂಧನಿಗೆ ತಡೆದುಕೊಳ್ಳಲಾಗಲಿಲ್ಲ. ಶ್ರೀಕೃಷ್ಣನನ್ನು ಮನಬಂದಂತೆ ನಿಂದಿಸುತ್ತ, "ಹುಲಿಯೊಡನೆ ಮೊಲಕ್ಕೆ ಕಾಳಗವೆ, ಸಿಂಹಕ್ಕೆ ಆನೆಮರಿ ಸಮನಾದೀತೆ, ನನ್ನನ್ನು ಕೆಣಕಿ ನೀ ಕೆಟ್ಟೆ, ಇದು ನಿನ್ನ ಪಿತ್ತವಿಕಾರವೋ ಮದ್ಯವಿಕಾರವೋ ಆಗಿರಬೇಕು. ಇನ್ನೀಗ ನಿನ್ನ ಹಣೆಬರಹವನ್ನು ತೊಡೆದು ಹಾಕುತ್ತೇನೆ" ಎಂದು ಅಬ್ಬರಿಸುತ್ತ ಭೀಮನನ್ನೇ ತನಗೆ ಸರಿಜೋಡಿಯೆಂದು ಮಲ್ಲಯುದ್ಧಕ್ಕೆ ಆಯ್ದುಕೊಂಡನು. ರಾಜಾಂಗಣ ರಣಾಂಗಣವಾಯಿತು.

**'ರಿಪುವ ಮುರಿ ನೆನೆನೆನೆ ಸಮೀರಣನ':** ಭೀಮಸೇನನು ಮಾಗಧನೊಡನೆ ದೀರ್ಘಕಾಲ ಸೆಣಸಾಡಿದನು. ಆ ಸೆಣಸಾಟ ಸಾಕೆಂಬುದನ್ನು ಸೂಚಿಸುತ್ತ ಶ್ರೀಕೃಷ್ಣನು, "ಶತ್ರುವನ್ನು ಸಂಹರಿಸು, ನಿನ್ನ ತಂದೆಯಾದ ವಾಯುದೇವನನ್ನು ನೆನೆಮಕೂ" ಎಂದು ಪ್ರೋತ್ಸಾಹಿಸಿದನು. ಆಗ ಭೀಮನು ಜರಾಸಂಧನನ್ನು ನೆಲಕ್ಕೆ ಅಪ್ಪಳಿಸಿ, ಅವನ ಕಾಲುಗಳನ್ನು ಹಿಡಿದು, ಎರಡು ಸೀಳಾಗಿ ಸಿಗಿದು ಎಸೆದನು. ನೆಲದ ಮೇಲೆ ಬಿದ್ದ ಸೀಳುಗಳು ಮತ್ತೆ ಮತ್ತೆ ಜೋಡಣೆಗೊಂಡು, ಮಾಗಧನು ಮೇಲೆದ್ದು ಬಂದು, ಭೀಮನೊಡನೆ ಹೋರಾಡುತ್ತಿದ್ದನು. ಈ ವಿಚಿತ್ರ ಅದೆಷ್ಟೋ ಬಾರಿ ನಡೆಯಿತು. ಆಗ ಶ್ರೀಕೃಷ್ಣನು ಜರಾಸಂಧನ ದೇಹದ ಸೀಳುಗಳು ಮತ್ತೆ ಕೂಡಿಕೊಳ್ಳಲು ಎಡೆಯಾಗದಂತೆ ಸಿಗಿದೆಸೆಯಬೇಕೆಂದು ತನ್ನ ಹಸ್ತಗಳನ್ನು ಹಿಂದುಮುಂದಾಗಿ ಜೋಡಿಸಿ, ಸನ್ನೆಮಾಡಿ ಭೀಮನನ್ನು ಎಚ್ಚರಿಸಿದನು. ಅದರಂತೆ ಭೀಮನು ಜರಾಸಂಧನನ್ನು ಯಮಪುರಿಗೆ ಅಟ್ಟಿದನು.

**ಶ್ರೀಕೃಷ್ಣನು ತನ್ನ ಅಭಯಹಸ್ತವನ್ನು ಮೇಲೆತ್ತಿದನು:** ಜರಾಸಂಧನು ಸತ್ತು ಬೀಳುತ್ತಿದ್ದಂತೆಯೇ ಗಿರಿವ್ರಜದಲ್ಲಿ ಭಯದ ವಾತಾವರಣ ಹಬ್ಬಿತು. ಪುರಜನರು ತಮಗೇನು ಗಂಡಾಂತರ ಕಾದಿದೆಯೋ ಎಂದು ಮನೆಯ ಬಾಗಿಲುಗಳನ್ನು ಭದ್ರಪಡಿಸಿಕೊಂಡರು. ಕೆಲವರು ಗುಹೆಗಳನ್ನು ಹೊಕ್ಕು ತಲೆಮರೆಸಿಕೊಂಡರು. ಅಂತಃಪುರದ ರಾಣಿಯರ ಕರುಣಾಕ್ರಂದನ ಮುಗಿಲುಮುಟ್ಟಿತು. ಆಗ ಶ್ರೀಕೃಷ್ಣನು ಎಲ್ಲರನ್ನೂ ತನ್ನ ಅಭಯವಚನಗಳಿಂದ ಸಂತೈಸಿದನು. "ಪುರಜನರು, ಸ್ತ್ರೀಯರು, ಅಂತಃಪುರದ ಪರಿವಾರದವರು, ಮಂತ್ರಿಗಳು, ಪ್ರಧಾನಿಗಳು, ಅಧಿಕಾರಿಗಳು, ಯಾರೂ ಭಯಪೀಡಿತರಾಗಬೇಡಿ. ಜರಾಸಂಧನ ಮಗನನ್ನು ಇಲ್ಲಿ ಕರೆಯಿರಿ; ಅಯ್ಯೋ, ನಾವು ಅವನನ್ನು ಕೊಲ್ಲುವುದುಂಟೆ? ಇದು ಭೀಮಾರ್ಜುನರೇ ಕೊಟ್ಟ ಅಭಯವೆಂದು ತಿಳಿಯಿರಿ" ಎಂದು ನಗೆಮೊಗದಿಂದಲೇ ಸಮಾಧಾನಪಡಿಸಿದನು:

**ಅಂಜದಿರಿ ಪುರದವರು, ವನಿತೆಯ ।**
**ರಂಜದಿರಿ ಮಾಗಧನ ಪರಿಜನ ।**
**ವಂಜದಿರಿ ಮಂತ್ರಿ ಪ್ರಧಾನ ಪಸಾಯ್ತರಾದವರು**
**ಅಂಜದಿರಿ ಕರೆ ಇವನ ಮಗನನು ।**

**ಭಂಜಿಸುವುದಿಲ್ಲಕಟ! ಭೀಮ ಧ**
**ನಂಜಯರು ಕೊಟ್ಟ ಅಭಯವೆಂದನು ನಗುತ ಮುರವೈರಿ ॥**
**(ಸಭಾಪರ್ವ, ೩-೧೨೨)**

**ಸಹದೇವನನ್ನು ಮುಂದಿಟ್ಟುಕೊಂಡು** ಬಂದರು: ಕೃಷ್ಣನು ಅಭಯದಾನ ಮಾಡುತ್ತಿದ್ದಂತೆಯೇ ಜರಾಸಂಧನ ಮಂತ್ರಿಗಳು, ಅವನ ಮಗನಾದ ಸಹದೇವನನ್ನು ಮುಂದಿಟ್ಟುಕೊಂಡು ಬಂದು. ಅಡ್ಡಬಿದ್ದು, "ಮುಂದಕ್ಕೆ ನಾವೇನು ಮಾಡಬೇಕೋ ನೀನೇ ಅಪ್ಪಣೆ ಕೊಡಿಸಬೇಕು, ಸ್ವಾಮಿ" ಎಂದು ಬೇಡಿಕೊಂಡರು. ಆಗ ಶ್ರೀಕೃಷ್ಣನು "ಜರಾಸಂಧನ ಅಂತ್ಯ ಸಂಸ್ಕಾರವನ್ನು ನೆರವೇರಿಸಿ, ನಂತರ ಸಹದೇವನನ್ನು ಮಗಧ ಸಿಂಹಾಸನವ ಮೇಲೆ ಕೂರಿಸಿ ಪಟ್ಟಾಭಿಷೇಕ ಮಾಡೋಣ. ಅದೆಲ್ಲ ನೆರವೇರುವವರೆಗೂ ನಾನು ಇಲ್ಲಿಯೇ ನಿಲ್ಲುತ್ತೇನೆ" ಎಂದು ಧೈರ್ಯ ತುಂಬಿದನು. ಆ ಬಳಿಕ ಕೃಷ್ಣಭೀಮಾರ್ಜುನರು ಸೆರೆಮನೆಯ ಬಾಗಿಲುಗಳನ್ನು ತೆರೆಯಿಸಿ, ಅಲ್ಲಿ ಬಂಧನದಲ್ಲಿದ್ದ ದೊರೆಗಳನ್ನೆಲ್ಲ ಮುಕ್ತಗೊಳಿಸಿದರು. ಆ ದೊರೆಗಳಿಗಾದ ಸಂಭ್ರಮ ಹೇಳತೀರದು. "ಸ್ವಾಮಿ, ನಿನ್ನ ಕೃಪೆಯಿಂದ ನಾವೆಲ್ಲರೂ ಕಾರಾಗೃಹದಿಂದ ಬಿಡುಗಡೆಗೊಂಡೆವು. ನೀನು ಮಾಡಿದ ಉಪಕಾರ ದೊಡ್ಡದು. ನಿನಗಾಗಿ ನಾವು ಮಾಡಬಹುದಾದ ಉಪಕಾರವೇನಾದರೂ ಇದ್ದರೆ ದಯಮಾಡಿ ಹೇಳು" ಎಂದು ಅವರೆಲ್ಲರೂ ಕೈಮುಗಿದು ಬೇಡಿಕೊಂಡರು. "ನೀವೆಲ್ಲರೂ ಜರಾಸಂಧನ ಬಂಧನದಲ್ಲಿ ಬಹುಕಾಲ ನವೆದು ನೊಂದಿದ್ದೀರಿ. ಭೀಮಸೇನನು ನಿಮ್ಮನ್ನು ಸ್ವತಂತ್ರರನ್ನಾಗಿಸಿದ್ದಾನೆ. ಇನ್ನೀಗ ನೀವು ನಿಮ್ಮ ನಿಮ್ಮ ರಾಜ್ಯಗಳನ್ನು ಹೊಕ್ಕು, ನಿಮ್ಮ ಪುರಜನರನ್ನೂ ಪರಿಜನರನ್ನೂ ಪ್ರೇಮದಿಂದ ಪಾಲಿಸಿರಿ. ಅದೇ ನೀವು ನನಗೆ ಮಾಡುವ ಉಪಕಾರವೆಂದು ತಿಳಿಯಿರಿ" ಎಂದು ಆದೇಶಿಸಿದನು. ಮತ್ತೆ ಮುಂದುವರಿದು "ಧರ್ಮರಾಯನು ಕೈಗೊಂಡಿರುವ ರಾಜಸೂಯ ಯಾಗಕ್ಕೆ ನೀವೆಲ್ಲರೂ ಆಗಮಿಸಿ ಅದನ್ನು ಚೆಂದಗಾಣಿಸಿ ಕೊಡಿ" ಎಂದು ತಾನೇ ಮುಂದಾಗಿ ಆಹ್ವಾನಿಸಿದನು. ಎಲ್ಲವೂ ಶ್ರೀಕೃಷ್ಣನ ಆದೇಶದಂತೆಯೇ ನಡೆಯಿತು.

### ಈ ಪ್ರಸಂಗದಲ್ಲಿ ವ್ಯಕ್ತವಾಗುವ ಶ್ರೀಕೃಷ್ಣನ ಕಲ್ಯಾಣ ಗುಣಗಳು

ಜರಾಸಂಧನ ಈ ಪ್ರಸಂಗದಲ್ಲಿ ಪ್ರಕಟವಾಗಿರುವ ಶ್ರೀಕೃಷ್ಣನ ವ್ಯಕ್ತಿತ್ವದ ಶ್ರೇಷ್ಠ ಗುಣಗಳನ್ನು ಈಗ ಪರಿಭಾವಿಸೋಣ:

೧. **ದುಷ್ಟಶಿಕ್ಷಣ ಶಿಷ್ಟರಕ್ಷಣ:** "ದುಷ್ಟರನ್ನು ದಂಡಿಸುವುದು, ಶಿಷ್ಟರನ್ನು ಮೇಲೆತ್ತುವುದು – ಇದೇ ನನ್ನ ಕಾರ್ಯ" ಎಂದು ಶ್ರೀಕೃಷ್ಣನು ಜರಾಸಂಧನೊಡನೆ ನೇರವಾಗಿಯೇ ಹೇಳಿದನು. ಅದಕ್ಕನುಸಾರವಾಗಿಯೇ ಅವನು ಜರಾಸಂಧನನ್ನು ಕೊಲ್ಲಿಸಿ, ಅವನ ಸೆರೆಯಾಳುಗಳಾಗಿದ್ದ ನೂರೊಂದು ವಂಶದ ದೊರೆಗಳನ್ನು ಬಿಡುಗಡೆಗೊಳಿಸಿದನು. ಹಾಗೆ ಮಾಡದಿದ್ದರೆ ಅವರೆಲ್ಲ ಮುಂದೆ ಜರಾಸಂಧನು ಕೈಗೊಳ್ಳಲಿದ್ದ ನರಯಜ್ಞದ ಬಲಿಪಶುಗಳಾಗುತ್ತಿದ್ದರು.

೨. **ಸರ್ವೇ ಜನಾಃ ಸುಖಿನೋ ಭವಂತು:** ಶ್ರೀಕೃಷ್ಣನು ತನಗಾಗಿ ಯಾವ ಉಪಕಾರವನ್ನೂ ಬಯಸಲಿಲ್ಲ. ಸೆರೆಯಿಂದ ಬಿಡುಗಡೆಗೊಂಡ ದೊರೆಗಳನ್ನು ಕುರಿತು "ನಿಮ್ಮ ಪುರಜನರನ್ನೂ ಪರಿಜನರನ್ನೂ ನೀವು ಚೆನ್ನಾಗಿ ಕಾಪಾಡುವುದೇ ನಿಮ್ಮಿಂದ ನನಗಾಗುವ ಉಪಕಾರ" ಎಂದು ಹೇಳುವ ಮಾತಿನಲ್ಲಿ, ಶ್ರೀಕೃಷ್ಣನ ಲೋಕಹಿತಚಿಂತನೆಯೇ ಅಡಕವಾಗಿದೆ.

೩. **ದೂರಗಾಮಿಯಾದ ಚಿಂತನೆಗಳು:** ಶ್ರೀಕೃಷ್ಣನು ದೂರದರ್ಶಿ, ಅವನ ಚಿಂತನೆಗಳು ದೂರಗಾಮಿಯಾಗಿವೆ. ಧರ್ಮರಾಯನ ರಾಜಸೂಯವು ನಿಷ್ಕಂಟಕವಾಗಿ ನೆರವೇರಬೇಕಾದರೆ ಜರಾಸಂಧನಂತಹ ಯಾಗದ್ವೇಷಿಗಳನ್ನು ಸವರಬೇಕು. ಯಾಗಕ್ಕೆ ಬೇಕಾಗುವ ದ್ರವ್ಯಸಂಚಯ ಮಾಡಬೇಕು. ಸೆರೆಯಿಂದ ಮುಕ್ತರಾದ ರಾಜಮಹಾರಾಜರು ಬೇಕಾದ ಹಾಗೆ ಕಪ್ಪಕಾಣಿಕೆಗಳನ್ನು ಕೊಟ್ಟರು; ಜರಾಸಂಧನ ಪುತ್ರ ಸಹದೇವನೂ ಶಕ್ತಿ ಮೀರಿ ಕೊಟ್ಟನು.

೪. **ಸಾಮೋಪಾಯವನ್ನು ಮುಂದಿಡಬೇಕು:** ಹಗೆಯೇ ಆದರೂ ಸರಿ, ಅವನನ್ನು ಏಕಾಏಕಿ ಕೊಲ್ಲುವುದು ಸಲ್ಲದು. ಅವನು ಉಪದೇಶವಾಣಿಗೆ ಕಿವಿಗೊಟ್ಟಾನೆಯೇ. ಸನ್ಮಾರ್ಗಾವಲಂಬಿಯಾದಾನೆಯೇ ಎಂದು ಪರೀಕ್ಷಿಸುವುದು ವೀರಧರ್ಮ. ಆ ಸಾಮೋಪಾಯವನ್ನು ಶ್ರೀಕೃಷ್ಣನು ಜರಾಸಂಧನ ಮೇಲೆ ಪ್ರಯೋಗಿಸಿದನು; ಅದು ಫಲಿಸದಿದ್ದಾಗ ಕೊಲ್ಲಿಸಿದನು.

೫. **ಶತ್ರುವಿನ ಎದೆಗೆಡಿಸಬೇಕು:** ಶತ್ರುವನ್ನು ಮಣಿಸುವುದಕ್ಕಾಗಲಿ, ಕೊನೆಗೊಳಿಸುವುದಕ್ಕಾಗಲಿ, ಅವನು ಧೈರ್ಯಗುಂದುವಂತೆ ಮಾಡುವುದು ಯುದ್ಧತಂತ್ರಗಳಲ್ಲೊಂದು. ಶ್ರೀಕೃಷ್ಣನು ನಡುರಾತ್ರಿಯಲ್ಲಿ ನಗಾರಿಯೊಡೆಯುವಂತೆ ಬಡಿದು ಜರಾಸಂಧನನ್ನು ನಡುಗಿಸಿಬಿಟ್ಟನು. ಸಭಾಭವನವನ್ನು ದ್ವಾರವಲ್ಲದ ದ್ವಾರದಿಂದ (ಅಪದ್ವಾರ) ಹೊಕ್ಕು ಮತ್ತಷ್ಟು ತಬ್ಬಿಬ್ಬುಗೊಳಿಸಿದನು. ವಿಪ್ರವೇಷದಿಂದ ಮತ್ತೂ ಅವನನ್ನು ಕಳವಳಕ್ಕೆ ತಳ್ಳಿದನು.

೬. **ಅಂಜದಿರಿ ಅಂಜದಿರಿ:** ರಿಪುನಿಗ್ರಹದ ಬಳಿಕ ಅವನ ಆಶ್ರಿತರನ್ನು ವಿನಾಕಾರಣ ಕೊಲ್ಲುವುದು ರಾಜಧರ್ಮವಲ್ಲವೆಂಬುದು ಕೃಷ್ಣನ ಅಭಿಮತ. ಅಂಜಿ ಅಡಗಿದ್ದವರನ್ನು ಕುರಿತು ಅದೆಷ್ಟು ಬಾರಿ, "ಅಂಜದಿರಿ, ಅಂಜದಿರಿ" ಎಂದು ಘೋಷಿಸಿ ಅವರ ಭಯವನ್ನು ತೊಡೆದನೋ! ಅನಂತರ ಜರಾಸಂಧನ ಮಗನನ್ನು ಪ್ರೇಮದಿಂದ ಕಂಡು ಪಟ್ಟಕ್ಕೇರಿಸಿ, ಕಣ್ತುಂಬ ನೋಡಿ ಹರ್ಷಪಟ್ಟನು. ಅವನ ಅಪ್ಪನ ಉತ್ತರಕ್ರಿಯಾದಿಗಳನ್ನು ಸಾಂಗಗೊಳಿಸಿಕೊಟ್ಟನು.

೭. **ಒಡನಾಡಿಗಳನ್ನು ಕಡೆಗಣಿಸುವವನಲ್ಲ:** ದುಷ್ಟಶಿಕ್ಷಣದ ಹೊಣೆಗಾರಿಕೆಯನ್ನು ಸಂಪೂರ್ಣವಾಗಿ ತಾನೇ ಹೊತ್ತುಕೊಂಡಿದ್ದರೂ ಭೀಮಾರ್ಜುನರ ಶೌರ್ಯಸಾಹಸಗಳನ್ನು ಅವನು ಕಡೆಗಣಿಸಲಿಲ್ಲ. "ಅಂಜದಿರಿ" ಎನ್ನುವಾಗ "ಇದು ಭೀಮಾರ್ಜುನರು ನೀಡುತ್ತಿರುವ ಅಭಯ" ಎಂದು ಹೇಳಿದ್ದನ್ನೂ, ಮುಕ್ತರಾದ ದೊರೆಗಳು ಮಣಿದಾಗ "ಭೀಮನು ನಿಮ್ಮನ್ನು ಬಿಡುಗಡೆಗೊಳಿಸಿದ್ದಾನೆ" ಎಂದು ಹೇಳಿದ್ದನ್ನೂ ಮನದಂದುಕೊಳ್ಳಬೇಕು.

೮. **ಶ್ರೀಕೃಷ್ಣನ ತಾಳ್ಮೆ ಅಪೂರ್ವವಾದುದು:** ಜರಾಸಂಧನು ಮೇರೆ ಮೀರಿ ನಿಂದಿಸಿದರೂ ಶ್ರೀಕೃಷ್ಣನು ತಾಳ್ಮೆಗೆಡಲಿಲ್ಲ. ಅರಿಷ್ಟಾಸುರ, ಪೂತನಿ, ಶಕಟಾಸುರ, ಬಕಾಸುರ, ತೃಣಾವರ್ತ, ಕೇಶಿದಾನವ, ಅಘಾಸುರ, ಧೇನುಕಾಸುರ ಮುಂತಾದವರನ್ನು ಶ್ರೀಕೃಷ್ಣನು ತನ್ನ ಬಾಲ್ಯದಲ್ಲಿಯೇ ಕೊಂದ ಶೌರ್ಯವನ್ನು ಅವನು, "ಹೋರಿ, ಹೆಂಗಸು, ಬಂಡಿ, ಪಕ್ಷಿ, ಸಮೀರಣ, ಅಶ್ವ, ಅಜಗರ, ಗಾರ್ದಭ ಮುಂತಾದ ವೀರರನ್ನು ಘಾತಿಸಿದವನಲ್ಲವೆ ನೀನು" ಎಂದು ಹಗುರವಾಗಿ ಕಂಡು ಹಂಗಿಸಿದರೂ ವಿಚಲಿತನಾಗದೆ, ಜರಾಸಂಧನಿಗೆ ತಕ್ಕ ಶಾಸ್ತಿ ಮಾಡಿಸಿದನು.

೯. **ಮಮ ಪ್ರಾಣಾ ಹಿ ಪಾಂಡವಾಃ :** ಪಾಂಡವರು ನನ್ನ ಪ್ರಾಣಕ್ಕೆ ಸಮಾನರೆಂದು ಘೋಷಿಸಿದ್ದ ಶ್ರೀಕೃಷ್ಣನು ಅದನ್ನು ಜರಾಸಂಧ ರಕ್ಕಸನ ಸಂಹಾರದ ಮೂಲಕ ಕಾರ್ಯಗತಗೊಳಿಸಿದನು.

**ಆದ್ದರಿಂದಲೇ ಜ್ಞಾನಿಗಳು ಹೇಳುತ್ತಾರೆ 'ಕೃಷ್ಣಂ ವಂದೇ ಜಗದ್ಗುರುಂ!'**